# ಹೊಸತು



## ವಿ-ಗಾರ್ಡ್ ಇಂಟೆಲಿಜೆಂಟ್ ಟೈಮ್ ಡಿಲೇ ಸಿಸ್ಟಂ

ಬಿಸಿಲ ಬೇಗೆಯ ನಡುವೆ ಕೈಕೊಡುವ ವಿದ್ಯುತ್ ಪೂರೈಕೆ, ವ್ಯತ್ಯಯದಿಂದ ಎಲೆಕ್ಟ್ರಾನಿಕ್ ವಸ್ತುಗಳು ಬೇಗನೆ ಕೆಟ್ಟು ಹೋಗುತ್ತವೆ.

ಈ ನಿಟ್ಟಿನಲ್ಲಿ ಹೊಸದಾಗಿ ಬಂದಿರುವ ವಿ–ಗಾರ್ಡ್ ಸ್ಟೆಬಿಲೈಸರ್ ಇಂಟೆಲಿಜೆಂಟ್ ಟೈಮ್ ಡಿಲೇ ಸಿಸ್ಟಂ ಎಲ್ಲಾ ತೆರನಾದ ವಿದ್ಯುತ್ ವ್ಯತ್ಯಯಗಳನ್ನು ಸಮರ್ಥವಾಗಿ ನಿಭಾಯಿಸುತ್ತದೆ. ಹೊಸದಾಗಿ ಇರುವ ಐಸಿ ಟೆಕ್ನಾಲಜಿ ಮತ್ತು ಬಿಲ್ಟ್‌ಇನ್ ಥರ್ಮಲ್ ಓವರ್ಲೋಡ್ ಸುರಕ್ಷತಾ ಸಾಧನದಿಂದಾಗಿ ಇದು ಸ್ಟಬಿಲೈಸರ್ ಮತ್ತು ಕಂಪ್ರೆಸರ್‌ಗಳ ಕಾರ್ಯವನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸುತ್ತದೆ.

ಬೆಲೆ ರೂ 2,500 ರೂಪಾಯಿ. ಎಲ್ಲಾ ಎಲೆಕ್ಟ್ರಾನಿಕ್ ಮಳಿಗೆಗಳಲ್ಲಿ ಲಭ್ಯ. ಮಾಹಿತಿಗೆ: 1800 3000 1800

## ಲೆನೊವೊ ಐಡಿಯಲ್ ಪ್ಯಾಡ್‌ಫ್ಲೆಕ್ಸ್ 10

ಪಿಸಿ, ಲ್ಯಾಪ್‌ಟಾಪ್ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿರುವ ಲೆನೊವೊ ಕಂಪೆನಿ ಇದೀಗ ಟು ಇನ್ ವನ್ ಕ್ಯಾಟಗರಿಯಲ್ಲಿ ಐಡಿಯಲ್ ಪ್ಯಾಡ್ ಫ್ಲೆಕ್ಸ್ 10 ಎಂಬ ಹೊಸ ಲ್ಯಾಪ್‌ಟಾಪ್ ಒಂದನ್ನು ಬಿಡುಗಡೆ ಮಾಡಿದೆ. ಇದು 10.1ಇಂಚಿನ ಡ್ಯುಯಲ್ ಮೋಡ್ ಮಿನಿ ನೋಟ್‌ಬುಕ್ ಆಗಿದ್ದು 10 ಪಾಯಿಂಟ್ ಮಲ್ಟಿಟಚ್ ಡಿಸ್‌ಪ್ಲೆ ಇದರಲ್ಲಿದೆ. ಬಳಕೆಗೆ ಸುಲಭ, ಕೊಂಡೊಯ್ಯಲು ಹಗುರ ಮತ್ತು ಇದರಲ್ಲಿರುವ ಅಪ್ಲಿಕೇಶನ್ಸ್ ಕೂಡ ಅತ್ಯಾಧುನಿಕವಾಗಿದೆ ಎನ್ನುವುದು ಕಂಪೆನಿ ಮಾತು. ಬೆಲೆ 25,990 ರೂಪಾಯಿ. ಮಾಹಿತಿಗೆ: 9663883216/9980139070







## ತುಟಿಯ ಅಂದಕ್ಕೆ ಚಾಪ್‌ಸ್ಟಿಕ್

ಅಂದದ ತುಟಿಗಳಿಗಾಗಿ ಹೊಸ ಚಾಪ್‌ಸ್ಟಿಕ್ ಮಾರುಕಟ್ಟೆಗೆ ಬಂದಿದೆ. ಸ್ಟ್ರಾಬೆರಿ, ಚೆರ್‍ರಿ, ಸ್ಪಿಯರ್‌ಮಿಂಟ್ ಮುಂತಾದವುಗಳಿಂದ ಸಮೃದ್ಧವಾಗಿದ್ದು ಆರೋಗ್ಯಕ್ಕೂ ಒಳ್ಳೆಯದು  ಸೂರ್ಯನ ಅತಿನೇರಳೆ ಕಿರಣಗಳಿಂದ ತುಟಿಗೆ ಹಾನಿಯಾಗುವುದನ್ನು ತಡೆಯುತ್ತದೆ ಎನ್ನುತ್ತದೆ ಕಂಪೆನಿ.

ಬೆಲೆ 209 ರೂಪಾಯಿ. ಮಾಹಿತಿಗೆ: 9619914505



## ಪ್ಲಾಟಿನಂ ಕಾಕ್‌ಟೈಲ್ ರಿಂಗ್

ಬೆಂಗಳೂರಿನ ಗೀತಾಂಜಲಿ ಜ್ಯುವೆಲ್ಲರಿ ಮಳಿಗೆ ಇದೀಗ ಹೊಸ ಮಾದರಿಯ ಪ್ಲಾಟಿನಂ ಕಾಕ್‌ಟೈಲ್ ರಿಂಗ್ ಒಂದನ್ನು ಮಾರುಕಟ್ಟೆಗೆ ತಂದಿದೆ. ಅತ್ಯಾಧುನಿಕ ವಿನ್ಯಾಸದ ಈ ರಿಂಗ್ ಮದುವೆಯ ಎಂಗೇಜ್‌ಮೆಂಟ್, ವ್ಯಾಲೆಂಟೈನ್ ಡೇ ಮುಂತಾದ ಸಂದರ್ಭದಲ್ಲಿ ಪ್ರೀತಿಪಾತ್ರರಿಗೆ ಉಡುಗೊರೆಯಾಗಿ ನೀಡಲು ಸೂಕ್ತವಾಗಿದೆ. ಹೂವಿನ ವಿನ್ಯಾಸದಲ್ಲಿ ಹೊರತಂದಿರುವ ಈ ಹೊಸ ಬಗೆಯ ರಿಂಗ್ ಪ್ಲಾಟಿನಂ ಪರಿಶುದ್ಧತೆಯ ಪ್ರತೀಕವಾಗಿದೆ ಎನ್ನುತ್ತದೆ ಕಂಪೆನಿ.

ಮಾಹಿತಿಗೆ: www.gitanjaligroup.com

## ಲೈಮ್‌ರೋಡ್ ಫ್ರೇಮ್

ಆನ್‌ಲೈನ್ ಉದ್ಯಮಕ್ಕೆ ಹೆಸರಾಗಿರುವ ಲೈಮ್‌ರೋಡ್.ಕಾಮ್ ಇದೀಗ ಒಳಾಂಗಣ ವಿನ್ಯಾಸಕ್ಕೆ ಆದ್ಯತೆ ನೀಡಿದ್ದು, ಗೋಡೆಯ ಅಲಂಕಾರಕ್ಕೆ ಹೊಸ ಬಗೆಯ ಪೋಸ್ಟರ್, ಫ್ರೇಮ್, ವರ್ಣಚಿತ್ರಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಹಲವು ವರ್ಣಗಳಿಂದ ಕೂಡಿದ ಪೋಸ್ಟರ್ ಮತ್ತು ಫ್ರೇಮ್‌ಗಳ ಮನೆಯ ಅಂದ ಹೆಚ್ಚಿಸಲು ಸಹಕಾರಿಯಾಗಲಿದೆ. ಬೆಲೆ 499 ರೂಪಾಯಿ.

ವಿವರಕ್ಕೆ: 9873108776/8095104383

